ಶ್ರೀ ಕೆ. ಎಚ್. ಮೆಂಕಟೆಪ್ಪ.—ಸ್ವಾಮಿ, ಈಗ ಈ ಕೇಸನ್ ಪಾಪಸ್ ತೆಗೆದುಕೊಂಡಿದ್ದೀರಾ ?

ಅಧ್ಯಕ್ಷರು.—ಅದಕ್ಕೆ ಉತ್ತರ ಕೊಟ್ಟಿದಾಗಿದೆ.

Sri J. B. MALLARADHYA.—Does not their dropping the proceedings amount to encouraging officers to take part in the future elections ?

Sri B. VAIKUNTA BALIGA.—It is a matter of opinion.

Sri M. RAMAPPA.—When a complaint is made against a Government servant, is it not the duty of the Government to pursue the matter ?

Sri B. VAIKUTA BALIGA.—This is not the election offence under the strict sense of term. Election offences would be enquired by the Election Tribunal.

Sri M. RAMAPPA.—Then, what provision of law this will come ?

Sri B. VAIKUNTA BALIGA.—When a complaint is made with regard to the irregularity committed by the officers appoint for the conduct of the elections, an enquiry has to be held.

STARTING OF AGRICULTURAL COLONIES IN THE FOREST AREAS OF THE STATE.

* *Q.*—400. Sri J. NARAYANAPPA (Mulbagal).—

Will the Government be pleased to state :—

(*a*) whether they intend starting agricultural colonies in the interest of poor landless people in the forest area fit for cultivation and in places having plenty of gomal ;

(*b*) whether it has come to their notice, that the Forest Department are planting fresh trees, in the neighbouring areas of the villages that are fit for cultivation while no attempts are being made to plant trees afresh in distant areas ?

A.—Sri H. S. RUDRAPPA (Minister for Forests).—

(*a*) Agriculture Department has sponsored a scheme for starting two Agricultural Colonies for the distressed and backward classes during the Third Plan period.

(*b*) While constituting the Forests the requirements of the villagers for agricultural lands, grazing areas, etc., were taken into consideration and Working Plans were drawn up for systematic exploitation and regeneration of the Forests. The afforestation programme of the Department is now carried on according to the prescriptions of the plans or the sanctioned synopsis and the blank areas in the Forests are planted with the tree species. It is not advisable nor desirable to part with any of the forests in the interest of the nation, when every effort is concentrated to bring as large areas under forest as possible, as we are well below the standard prescribed under the National Forest Policy.

ಶ್ರೀ ಜೆ. ನಾರಾಯಣಪ್ಪ.—ಅರಣ್ಯವನ್ನು ಬೆಳೆಸಬೇಕು ಎಂಬುದಕ್ಕೆ ಯಾರ ಅಭ್ಯಂತರ ಏಲ್ಲ. ಆದರೆ ಗ್ರಾಮುಗಳ ಅಕ್ಕಪಕ್ಕದಲ್ಲಿ ಸಾಗುವಳಿ ಮಾಡಲು ಯೋಗ್ಯವಾದ ಪ್ರದೇಶಗಳಲ್ಲಿ ಹೊಸದಾಗಿ ಗಿಡಗಳನ್ನು ನೆಡಲು ಪ್ರಯತ್ನ ಮಾಡದೆ ಅಂಥ ಪ್ರದೇಶವನ್ನು ಬಿಟ್ಟು ಕೊಡುತ್ತೀರಾ ?

† ಶ್ರೀ ಎಚ್. ಎಸ್. ರುದ್ರಪ್ಪ.—ಬಿಟ್ಟು ಕೊಡಬೇಕಾದುದನ್ನು ಬಿಟ್ಟು ಕೊಡುತ್ತೇವೆ. ಕೇಂದ್ರ ಸರಕಾರದ ಸಕ್ಯುರ್ಲರ್ ಪ್ರಕಾರ ಅರಣ್ಯ ನಿರ್ಮಾಣ ಕಾರ್ಯಕ್ರಮವನ್ನು ಮುಂದುವರಿಸಬೇಕಾಗಿದೆ. ಅದರಲ್ಲಿ ಏನಾದರೂ ಕಷ್ಟ ಇರುವ ಸಂದರ್ಭ ಬಂದರೆ ಸ್ವಲ್ಪ ಪ್ರದೇಶವನ್ನು ಬಿಟ್ಟು ಬಿಡುತ್ತೇವೆ.

ಶ್ರೀ ಜೆ. ನಾರಾಯಣಪ್ಪ.—ಈ ವ್ಯವಸಾಯದ ವಸಾಹತುಗಳನ್ನು ಹೊಸದಾಗಿ ಎಲ್ಲಿ ನಿರ್ಮಾಣ ಮಾಡಬೇಕೆಂದು ಮಾಡಿದ್ದೀರಿ ?

ಶ್ರೀ ಎಚ್. ಎಸ್. ರುದ್ರಪ್ಪ.—ಮೂರನೇ ಯೋಜನೆಯಲ್ಲಿ ಎರಡು ವ್ಯವಸಾಯದ ವಸಾಹತುಗಳನ್ನು ಪ್ರಾರಂಭ ಮಾಡುತ್ತೇವೆಂದು ಹೇಳಿದ್ದೇವೆ. ಇನ್ನು ಎಲ್ಲಿ ಮಾಡಬೇಕು ಎಂಬುದನ್ನು ಯೋಚನೆ ಮಾಡಿ ಮಾಡುತ್ತೇವೆ.

ಶ್ರೀ ಡಿ. ಮೂಕಪ್ಪ.—ಮಲೆನಾಡು ಪ್ರದೇಶದಲ್ಲಿ ವ್ಯವಸಾಯಕ್ಕೆ ಬರತಕ್ಕಂಥ ಜಮೀನು ಇದ್ದರೂ ಕೂಡ ಅಲ್ಲಿ ದೊಡ್ಡ ಕಾಡು ನಿರ್ಮಾಣ ಮಾಡವ ಕಾರ್ಯ ನಡೆಯಲಿದೆ ಎಂಬುದು ಸರಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಎಚ್. ಎಸ್. ರುದ್ರಪ್ಪ.—ಈ ವಿಚಾರದಲ್ಲಿ ಬಹುದಿವಸಗಳಿಂದ ಅರಣ್ಯ ಇಲಾಖೆಯಲ್ಲಿ ಒಂದು Working Plan ತಯಾರುಮಾಡಿ ಇಷ್ಟು ಅರಣ್ಯ ಬೆಳೆಸಬೇಕು ಎಂದು ಮಾಡಿದ್ದಾರೆ. ಆದರೆ ಶರಾವತಿ ಯೋಜನೆಯ ಪ್ರದೇಶದಲ್ಲಿ ರೈತರಿಗೆ ವ್ಯವಸಾಯ ಮಾಡುವದಕ್ಕೋಸ್ಕರ 5 ಸಾವಿರ ಎಕರೆ ಜಮೀನು ಬಿಟ್ಟು ಕೊಟ್ಟಿದ್ದೇವೆ. ಶರಾವತಿ ಯೋಜನೆಯ ಮೂಲಕ ಲಕ್ಷಾಂತರ ಎಕರೆ ಭೂಮಿ ಮುಳುಗಡೆಯಾಗುವದರಿಂದ ಅರಣ್ಯ ಪ್ರದೇಶ ಕಡಿಮೆಯಾಗುತ್ತದೆ.

ಶ್ರೀ ಎ. ಮುನಿಯಪ್ಪ.—ಹಿಂದುಳಿದ ವರ್ಗದ ಅನೇಕ ರೈತರಿಗೆ ಸಾಗುವಳಿ ಮಾಡುವದಕ್ಕೆ ಭೂಮಿಯನ್ನು ಅವರ ವಶಕ್ಕೆ ಕೊಟ್ಟಿಲ್ಲ ಎಂಬುದು ಸರಕಾರದ ಗಮನಕ್ಕೆ ಬಂದಿಲ್ಲವೇ ?

ಶ್ರೀ ಎಚ್. ಎಸ್. ರುದ್ರಪ್ಪ.—ಬಂದಿಲ್ಲ.

ಶ್ರೀ ಎ. ಮುನಿಯಪ್ಪ.—ಈ ವಿಚಾರವನ್ನು ಎರಡು ಮೂರುಸಾರಿ ನಾನು ಹೇಳುತ್ತಲೇ ಬಂದಿದ್ದೇನೆ. ಈ ಬಗ್ಗೆ ಇನ್‌ಕ್ವಾಯರಿ ಮಾಡಿ ಜಮೀನು ವಶಪಡಿಸಿಕೊಂಡು ಆದಷ್ಟು ಬೇಗನೇ ಕೊಡುತ್ತೀರಾ ?

ಶ್ರೀ ಎಚ್. ಎಸ್. ರುದ್ರಪ್ಪ.—ಈಗ ಈ ವಿಚಾರ ನೀವು ನನಗೆ ತಿಳಿಸಿದ್ದೀರಿ. ಇದರ ಬಗ್ಗೆ ಕೂಡಲೆ ಕ್ರಮ ಕೈಗೆದುಕೊಳ್ಳುತ್ತೇನೆ.

ಶ್ರೀ ಟಿ. ಹನುಮಯ್ಯ.—ಗಿಡ ಬೆಳೆದಂಥ ಪ್ರದೇಶಕ್ಕೆ ಅರಣ್ಯ ಎನ್ನುತ್ತೀರಿ ಅಥವಾ ಗಿಡ ಬೆಳೆಯದೇ ಇದ್ದರೂ ಕೂಡ ಅದಕ್ಕೆ ಕಾಡು ಎನ್ನುತ್ತೀರಾ ?

ಶ್ರೀ ಎಚ್. ಎಸ್. ರುದ್ರಪ್ಪ.—ಕೆಲವು ಭಾಗದಲ್ಲಿ ಗಿಡ ಬೆಳೆದಿಲ್ಲ. ಈಗ ಬೆಳೆಸಲಾಗುತ್ತಿದೆ. ಇನ್ನೂ ಹೆಚ್ಚಿಗೆ ಗಿಡ ಬೆಳೆಸಿ ಅರಣ್ಯ ಪ್ರದೇಶ ಹಾಸ್ತು ಮಾಡಬೇಕಾಗಿದೆ. ಆಮೇಲೆ ಎಲ್ಲವೂ ಸರಿಹೋಗುವುದು.

ಶ್ರೀ ಟಿ. ಹನುಮಯ್ಯ.—ಸಾಗುವಳಿಗೆ ಯೋಗ್ಯವಾದ ಪ್ರದೇಶವನ್ನು ಗಿಡ ಬೆಳೆಸಿ ಅರಣ್ಯ ಮಾಡದೆ ಅದನ್ನು ಸಾಗುವಳಿಗೆ ಕೊಡುತ್ತೀರಾ ?

ಶ್ರೀ ಎಚ್. ಎಸ್. ರುದ್ರಪ್ಪ.—ಇಂಡಿಯಾ ಸರಕಾರದವರು ಹೇಳಿದ ನೀತಿಗೆ ಅನುಸಾರವಾಗಿ ಕಾಡು ಬೆಳೆಸಬೇಕಾಗಿದೆ. ಅದಕ್ಕೆ ಅವರು ಹೇರಳವಾದ ಹಣ ಕೂಡ ಒದಗಿಸುತ್ತಿದ್ದಾರೆ. ಆದ್ದರಿಂದ ಅರಣ್ಯ ಬೆಳಸಬೇಕಾಗಿದೆ. ಅದರಲ್ಲಿ ಏನಾದರು ಕಷ್ಟವಿರುವುದು ಕಂಡುಬಂದರೆ ಅಂಥ ಪ್ರದೇಶ ಬಿಟ್ಟು ಕೊಡುತ್ತೇನೆ.

ಶ್ರೀ ಟಿ. ಹನುಮಯ್ಯ.—ಗಿಡ ನೆಡುವ ಕಾರ್ಯಕ್ರಮದ ಬಗ್ಗೆ ಅರಣ್ಯ ಇಲಾಖೆಯವರು ಏನು ಮಾಡುತ್ತಿದ್ದಾರೆ? ಇದರ ಬಗ್ಗೆ ಒಂದು ರಿಪೋರ್ಟ್ ತರಿಸಿ ಜಾಗ್ರತೆ ಒಂದು ಕಾರ್ಯಕ್ರಮ ಹಾಕಿಕೊಳ್ಳುತ್ತೀರಾ ?

ಶ್ರೀ ಎಚ್. ಎಸ್. ರುದ್ರಪ್ಪ.—ಮೊದಲು ಒಂದು Working Plan ಇರಲ್ಲಿಲ್ಲ, ಈಚೆಗೆ ಎರಡನೇ ಯೋಜನೆಯಲ್ಲಿ ಈ ಕೆಲಸ ಪ್ರಾರಂಭವಾಗಿದೆ. ಇದು ಸ್ವಲ್ಪ ಜಾಸ್ತಿಯಾಗಬಹುದು. ಆದರೂ ಕೂಡ ವ್ಯವಸಾಯಕ್ಕೆ ಜಮೀನನ್ನು ಜನಗಳಿಗೆ ಕೊಡುತ್ತೇವೆಂದು ಆಗಲೇ ಹೇಳಿದೆ.

ಶ್ರೀಮತಿ ಬಸವರಾಜೇಶ್ವರಿ.—ಅನೇಕ ವರ್ಷಗಳಿಂದ ಸಾಗುವಳಿ ಮಾಡುತ್ತ ಬಂದಿರುವ ರೈತರಿಗೆ ಆ ಜಮೀನು ಹೊರೆಯದೇ ಇರುವದರಿಂದ ಸಾಗುವಳಿ ಮಾಡುವದಕ್ಕೆ ರೈತರಿಗೆ ಅನಾನು ಕೂಲವಾಗಿದೆ. ಅಂಥ ಪ್ರದೇಶವನ್ನು ಸಾಗುವಳಿಗೆಗೆ ಕೊಡುತ್ತೀರಾ ?

ಶ್ರೀ ಎಚ್. ಎಸ್. ರುದ್ರಪ್ಪ.—ಅಲ್ಲಿ ಅವರು ಸಾಗುವಳಿ ಮಾಡುತ್ತಿದ್ದರೆ ಇದನ್ನು ಯೋಚನೆ ಮಾಡುತ್ತೇವೆ.

1-30 P. M.

ಶ್ರೀಮತಿ ಬಸವರಾಜೇಶ್ವರಿ.—20-30ವರ್ಷಗಳಿಂದ ಸಾಗುವಳಿ ಮಾಡುತ್ತಿರುವವರ ಮೇಲೆ ರೆವೆನ್ಯೂ ಇಲಾಖೆಯವರು ತಕರಾರ್ ತಃಖ್ತೆ ಹಾಕಿ ಹೆನಾಲ್ಟಿ ವಸೂಲ್ಮಾಡುತ್ತಿದ್ದಾರೆ. ಜಮೀನು ಸಾಗುವಳಿದಾರರಿಗೆ ಕೊಡುವ ವಿಷಯ ಆಖೈರಾಗಿ ತಿರ್ಮಾನವಾಗುವವರೆಗೂ ಇದನ್ನು ತಡೆ ಗಟ್ಟುವುದಕ್ಕೆ ಆಲೋಚನೆ ಮಾಡುತ್ತಿರಾ ?

ಶ್ರೀ ಎಚ್. ಎಸ್. ರುದ್ರಪ್ಪ.—ರೆವೆನ್ಯೂ ಇಲಾಖೆಯವರು ಅಕ್ರಮವಾಗಿ ಸಾಗುವಳಿ ಮಾಡುವವರ ಮೇಲೆ ತಕರಾರು ತಃಖ್ತೆಗಳನ್ನು ಹಾಕಿ, ಫೈನ್ ಹಾಕುತ್ತಾರೆ. ಈ ವಿಚಾರವನ್ನು ಮಾನ್ಯ ರೆವೆನ್ಯೂ ಮಂತ್ರಿಗಳು ಯೋಚನೆಮಾಡಬೇಕು.

ಶ್ರೀ ಎಸ್. ಆರ್. ರಾಮಯ್ಯ.—ಅರಣ್ಯ ಪ್ರದೇಶದಲ್ಲಿ ಜಮೀನನ್ನು ಕೇಳಿದರೆ ಕೊಡುವು ದಿಲ್ಲವೆಂದು ಹೇಳುತ್ತಾರೆ. ಆದರೆ ಅಕ್ರಮವಾಗಿ ಸಾಗುವಳಿ ಮಾಡಿರುವುದನ್ನು ಹಿಂದೆ ಇವರು ಅರಣ್ಯ ಖಾತೆಯ ಮಂತ್ರಿಗಳಾಗಿದ್ದಾಗ ತೋರಿಸಿದ್ದರೂ, ತಮಗೆ ಆ ವಿಚಾರ ಗೊತ್ತಿಲ್ಲವೆಂದು ಹೇಳುತ್ತಿದ್ದಾರೆ. ಈಗಲಾದರು ದಾಖಲೆಗಳನ್ನು ತರಿಸಿಕೊಂಡು ಸರಿಪಡಿಸುತ್ತಾರೆಯೇ ?

ಶ್ರೀ ಎಚ್. ಎಸ್. ರುದ್ರಪ್ಪ.—ಸರ್ಕಾರಕ್ಕೆ ಗೊತ್ತಿರುವ ಸಂದರ್ಭಗಳಲ್ಲಿ ಅವರಿಂದ ಬಿಡಿಸಿ ಸರ್ಕಾರದ ವಶಕ್ಕೆ ತೆಗೆದು ಕೊಂಡಿದೇವೆ. ಬೇರೆ ಸಂಧರ್ಭಗಳಲ್ಲಿ ಈ ರೀತಿ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದರೆ ಅವರನ್ನೂ ಬಿಡಿಸುತ್ತೇವೆ.

Sri G. B. SHANKAR RAO.—May I ask why Government should not think of allowing forest lands under the management of the Revenue Department to be cultivated ?

Mr. SPEAKER.—That question does not arise. This question refers to forest under the Forest Department.

ಶ್ರೀ ಜೆ. ನಾರಾಯಣಪ್ಪ.—ಹೆಚ್ಚು ಅರಣ್ಯ ಬೆಳಿಸಬೇಕು. ಎನ್ನುವುದು ಕೇಂದ್ರ ಸರ್ಕಾದ ನೀತಿಯಾದರೆ ಕಾರವಾರ ಕೊಡಗು ಈ ಭಾಗಗಳಲ್ಲಿ ಅರಣ್ಯವನ್ನು ಬೆಳೆಸಬಹುದು ಕೋಲಾರ ಜಿಲ್ಲೆಯಲ್ಲ ಜನಸಂಖ್ಯೆ ಜಾಸ್ತಿ ಇದ್ದು ಅರಣ್ಯಗಳಿಂದ ಅಷ್ಟು ಉತ್ಪತ್ತಿ ಇಲ್ಲದೆ ಇರುವುದ ರಿಂದ ಇಂಥ ಪ್ರದೇಶಗಳಲ್ಲಿ ಕಾಲೋನಿಗಳನ್ನು ಕಟ್ಟಲು ಅವಕಾಶ ಕಲ್ಪಿಸುತ್ತೀರಾ ?

ಶ್ರೀ ಎಚ್. ಎಸ್. ರುದ್ರಪ್ಪ.—ಅರಣ್ಯ ಹೆಚ್ಚಿಗೆ ಇರುವ ಕಡೆ ಬೆಳೆಸತಕ್ಕದ್ದು ಅಷ್ಟೇನೂ ಉಪಯುಕ್ತವಾದುದಲ್ಲ. ಅದರಿಂದ ಜನಗಳಿಗೂ ಪ್ರಯೋಜನವಾಗುವುದಿಲ್ಲ. ಪ್ರತಿ ಜಿಲ್ಲೆ ಮತ್ತು ತಾಲ್ಲೂಕಿನಲ್ಲಿ ಅರಣ್ಯಗಳನ್ನು ಬೆಳಸಬೇಕು. ಕೋಲಾರ ಜಿಲ್ಲೆಯಲ್ಲಿ ಮಳೆ ಕಡಿಮೆ ಬೀಳುವುದ ರಿಂದ ಅಲ್ಲಿ ಅರಣ್ಯಗಳನ್ನು ಬೆಳಸಿ ಅವರಿಗೆ ಸಹಾಯ ಮಾಡಬೇಕು.

ಶ್ರೀ ಜೆ. ನಾರಾಯಣಪ್ಪ.—ಮರಗಳಿಂದ ಮಳೆ ಬರುವುದಿಲ್ಲ. ಕೋಲಾರ ಜಿಲ್ಲೆಯಲ್ಲಿ ಹೆಚ್ಚು ಆಹಾರ ಬೆಳೆಯಲು ಕಾಲೋನಿಗಳನ್ನು ಮಾಡುತ್ತೀರಾ ?

ಶ್ರೀ ಎಚ್. ಎಸ್. ರುದ್ರಪ್ಪ.—ಇದು ತಮ್ಮ ಅಭಿಪ್ರಾಯ. ತಜ್ಞರ ಅಭಿಪ್ರಾಯ ಬೇರೆ ರೀತಿ ಇದೆ.

ಶ್ರೀ ಡಿ. ಮೂಕಪ್ಪ.—ಮಲೆನಾಡಿನಲ್ಲಿ ಕಾನ್‌ಖರಾಬನ್ನು ಅರಣ್ಯಕ್ಕೆ ಸೇರಿಸಿಕೊಂಡು, ಅರಣ್ಯದಲ್ಲಿರುವ ವ್ಯವಸಾಯಕ್ಕೆ ಯೋಗ್ಯವಾದ ಜಮೀನನ್ನು ಬಿಟ್ಟುಕೊಡುವುದಕ್ಕೆ ಆಲೋಚನೆ ಮಾಡುತ್ತೀರಾ ?

ಶ್ರೀ ಎಚ್. ಎಸ್. ರುದ್ರಪ್ಪ ಅರಣ್ಯದೊಳಗಡೆ ಅಂಥ ಜಮೀನಿದ್ದರೆ ಅದನ್ನು ಬಿಡುವುದು ಕಷ್ಟವಾಗುತ್ತದೆ. ಅರಣ್ಯದ ಅಂಚಿನಲ್ಲಿ ಕೊಡಬಹುದು ಎಂದು ಹೇಳಿದ್ದೇನೆ.

Sri G. SIVAPPA.—The answer reveals that we are far below the standard prescribed under the national forest development policy. My opinoin is either the Government should plant trees or allow the land to be cultivated. Which is the policy of Government in this respect ?

Sri H. S. RUDRAPPA.—To grow trees.

Sri G. SIVAPPA.—You are not doing it. From my experience I can say that vast tracts of land are lying idle without being put to any effective use.

Sri H. S. RUDRAPPA.—It has been explained that we have a phased programme and a working plan. we cannot develop a forest in a day or in an year.

ಶ್ರೀ ಜೆ. ನಾರಾಯಣಪ್ಪ.—ಅರಣ್ಯದಲ್ಲಿ ಮಧ್ಯದಲ್ಲಿ ಇರುವ ಜಮೀನನ್ನು ಬಿಟ್ಟುಕೊಡಲು ಕೇಳುತ್ತಿಲ್ಲ. ಕಡೆ ಭಾಗಗಳಲ್ಲಿ, ಅಂಚಿನಲ್ಲಿರುವ ಉತ್ಕೃಲಷ್ಟವಾದ ಜಮೀನನ್ನು ಡಿಪ್ರೆಸ್ಡ್ ಕ್ಲಾಸ್‌ನವರಿಗೂ ಮತ್ತು ಜಮೀನಿಲ್ಲದೆ ಇರುವ ಬಡವರಿಗೂ ಕೊಡಿ ಎಂದು ಕೇಳುತ್ತಿದ್ದೇವೆ. ಆದ್ದರಿಂದ ಕೋಲಾರ ಜಿಲ್ಲೆಯಲ್ಲಿ ಎರಡು ಮೂರು ಕಾಲೊನಿಗಳನ್ನು ಕಟ್ಟಿಸುವುಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎಚ್. ಎಸ್. ರುದ್ರಪ್ಪ.—ಅದನ್ನು ಸರ್ಕಾರ ಪರಿಶೀಲನ ಬೇಕಾಗುತ್ತದೆ.

PAYMENT OF AMOUNT DUE TO CORPORATION OF BANGALORE

*Q.—504. Sri F. W. CORBETT (Nominated).—

Will the Government be pleased to state:—

(*a*) how much of the sum of Rs. 37,59,005–82 nP. shown as due to the Corporation of Bangalore upto the end of June, 1960, in answer to question No. 205 in the August–September 1960 Session of the Assembly has been paid and how much remains to be paid ;

(*b*) the dates from which these amounts are due ;

(*c*) whether they will take steps to have these amounts paid by the end of March 1961 or as soon as possible?